ಬೂಕನಕೆರೆ ವಿಜೇಂದ್ರ, ಮೈಸೂರು
ಗಂಡಸರಿಗಿಂತ ಹೆಂಗಸರೇ ಯಾವಾಗಲೂ ಖುಷಿಯಿಂದ ಇರುತ್ತಾರಲ್ಲ?



ಗಂಡಸರ ಮಂಗನಾಟವೇ ಅದಕ್ಕೆ ಕಾರಣವಂತೆ.

ಪದ್ಮನಾಭರಾವ್, ಮೈಸೂರು
ಮಾತಿನಲ್ಲಿ ರಾಜಕಾರಣಿಗಳು ಮಿಗಿಲೋ ಅಥವಾ ಮಾತೆಯರು ಮಿಗಿಲೋ?
ಮಾತೆಯರೇ; ರಾಜಕಾರಣಿಗಳದು ಎಲೆಕ್ಷನ್ ಮುಗಿದ ಮೇಲೆ ಸರ್ಪನಿದ್ರೆ.

ಕೆ.ವಿ. ಗೋವಿಂದಾಚಾರಿ, ಮೈಸೂರು
ಬಹುತೇಕ ಆಸ್ಪತ್ರೆಗಳಲ್ಲಿ ಆಹಾರತಜ್ಞರು ಮಹಿಳೆಯರೇ ಇರುತ್ತಾರಲ್ಲ, ಏಕೆ?
ರುಚಿಯಿಲ್ಲದ ಹೊಸರುಚಿಗಳನ್ನು ಪ್ರಯೋಗಿಸಲು ವಿಪುಲ ಅವಕಾಶ ದೊರಕುವುದರಿಂದ.

ಟಿ.ಎಂ. ಮಾನಪ್ಪ, ಶಿವಮೊಗ್ಗ
ಕೋಪ ನೆತ್ತಿಗೇರಿತು ಎನ್ನುವರಲ್ಲ, ಅದೇನು ಎಣ್ಣೆಯೇ?



ಊಹೂಂ. ಚಿತ್ತಪರ್ವತದೊಳಗಿಂದ ಚಿಮ್ಮುವ ಲಾವಾ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಎಲ್ಲಿಂದ, ಎಲ್ಲಿಗೆ ಮತ್ತು ಯಾಕೆ – ಈ ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವೆ?
ಇಲ್ಲಿಂದ ಅಲ್ಲಿಗೆ; ವೃದ್ಧಿ/ವಿಮೋಚನೆಗೆ.

ಮಹಾವೀರ ಕಾಸರ, ಶಿವಮೊಗ್ಗ
ಶ್ರೀಮಂತರು ರೋಲ್ಡ್ ಗೋಲ್ಡ್ ಆಭರಣ ಧರಿಸಿದರೂ ಜನರು ಅವನ್ನು ಅಸಲಿ ಚಿನ್ನವೆಂದು ಭಾವಿಸುವರಲ್ಲ?
ಜೈಲಿನ ಕಳ್ಳನನ್ನು ಭಾವಿ ಮುಂತ್ರಿಯೆಂದು ಭಾವಿಸುವುದರ ಮುಂದೆ ಇದೇನು ಮಹಾ!

ಅಮರಯ್ಯಾ ಪತ್ರಿಮಠ, ಸುರಪುರ
ಯಾವುದರಲ್ಲಿ 'ಬ್ರಹ್ಮಾನಂದ' ಅಡಗಿದೆ?
ಜಿ. ವೆಂಕಟಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಸಿದ್ಧಪಡಿಸಿರುವ ನಿಘಂಟಿನ ಆರನೆಯ ಸಂಪುಟದಲ್ಲಿ.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ಕನ್ನಡವು ಅನ್ನದ ಭಾಷೆ ಆಗುವುದು ಯಾವಾಗ ಸಾರ್?
ಕನ್ನಡ ಡಿಟಿಪಿಯಿಂದಲೇ ಜೀವನ ಸಾಗಿಸಬೇಕಾದಾಗ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಕಾಂತಾರ ಎಂದರೆ ಅರ್ಥ ಏನು ಸಾರ್?
'ಕಾಡು' ಎಂದು. ಅದು ಮೆಚ್ಚಿದವರ ನೆನಪನ್ನು, ಮತ್ಸರಿಗಳ ಮನವನ್ನು ಮತ್ತೆ ಮತ್ತೆ ಕಾಡುತ್ತಿದೆಯಂತೆ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ಇಬ್ಬರು ಪತ್ನಿಯರು, ಒಬ್ಬ ಪತಿ ಒಂದೇ ಮನೆಯಲ್ಲಿರುವಂತೆ ಇಬ್ಬರು ಪತಿಯರು, ಒಬ್ಬ ಸತಿ ಇರಲೇಕೆ ಸಾಧ್ಯವಿಲ್ಲ?
ಬೀದಿನಾಯಿಯು ಚಪ್ಪಲಿ ಕದ್ದರೆ ಇಬ್ಬರಲ್ಲೊಬ್ಬನು ದೇಶಸಂಚಾರ ಹೊರಡಬೇಕಲ್ಲ, ಇಂದು ಅಷ್ಟು ಬಿಡುವಿರದು.

ಬಾ.ರಂ. ಸುರೇಶ್, ಶಿವಮೊಗ್ಗ
ದೇವರು, ದೇವಸ್ಥಾನ, ಮಠದ ಸ್ವಾಮಿಗಳನ್ನು ಭೇಟಿಯಾದರೆ ಪುಣ್ಯ ಬರುತ್ತದಂತೆ, ನಿಜವೆ?
ಯಃಕಶ್ಚಿತ್ ಪುಣ್ಯಕ್ಕೆ ಅಲ್ಲೆಲ್ಲ ಏಕೆ ಹೋಗಬೇಕು, ಹಸಿದವನಿಗೆ ಅನ್ನವಿಕ್ಕಿರಿ ಸಾಕು.

ಎನ್. ವೈದೇಹಿ, ಮೈಸೂರು
ಮಾಡಿದ ತಪ್ಪಿಗೆ ಶಿಕ್ಷೆ ತಪ್ಪದೆಂದು ಗೊತ್ತಿದ್ದರೂ ಇತ್ತೀಚೆಗೆ ಅಪರಾಧಗಳು ಹೆಚ್ಚುತ್ತಿರಲು ಕಾರಣ?
ಕೆಲವು ಕೀರ್ತನೆಗಳಂತೆಯೇ ಕಾನೂನೂ ವಿಳಂಬಕಾಲದಲ್ಲಿ ನಡೆಯುತ್ತಿರುವುದರಿಂದ.

ಕೆ.ಎಸ್. ಸೋಮೇಶ್ವರ, ಬೆಂಗಳೂರು
ಹೆಣ್ಣುದೇವತೆಗಳಿಗೂ ಶ್ರೀ ಎಂದೇ ಸಂಬೋಧಿಸುವುದು ಏಕೆ?
ಪುರುಷ ದೇವತೆಗಳಂತೆಯೇ 'ಮತಿ' ಬಳಸದೆ ವರ ಕೊಟ್ಟುಬಿಟ್ಟದ್ದರಿಂದ 'ಮತಿ' ಬಳಕೆ ನಿಂತಿತಂತೆ.

## ಬಹುಮಾನಿತ ಪ್ರಶ್ನೆ

ವಿ. ಹೇಮಂತಕುಮಾರ್, ಬೆಂಗಳೂರು
ಲಂಚ ತಿಂದು ದೇವಸ್ಥಾನಕ್ಕೆ ಹೋಗಬಹುದಾ?
ಹೋಗಬಹುದು; ಆದರೆ ನಂತರ ಅವರು ನಿಂತ ನೆಲವನ್ನು ಸಗಣಿ ಹಾಕಿ ಶುದ್ಧಗೊಳಿಸಬೇಕು.

ಅನಸೂಯ ಟಿ, ಕೇದಿಗೆಮನೆ
ಮೀನಮೇಷ ಎಣಿಸು ಎನ್ನುವುದರ ಬದಲು ಮೇಷಮೀನ ಎಣಿಸು ಎಂದರೆ?
ಹಾಗೆಂದವನ ಲೆಕ್ಕ ಸಂಪೂರ್ಣ ತಲೆಕೆಳಗಾಗಿದೆ ಎಂದು ಅರ್ಥ.

ಮಂಡಿ ಕುಮಾರ್, ಬೆಂಗಳೂರು
ಜನ್ಮದಾತ, ಜನ್ಮದಾತೆಯರಲ್ಲಿ ಪ್ರಾಮುಖ್ಯತೆ ಯಾರಿಗೆ?
ಜನ್ಮದಾತೆಗೇ – ಊರಿನ ತುಂಬಾ ದೇವಿಯರ ದೇಗುಲಗಳಿವೆ, ಬ್ರಹ್ಮನದು ಬೆರಳೆಣಿಕೆಯಷ್ಟು.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಹಗಲಲ್ಲಿ ಬೊಗಳದ ಶ್ವಾನಗಳು ರಾತ್ರಿಯ ವೇಳೆಯಲ್ಲಿ ಬೊಗಳುವುದೇಕೆ?



ಎರಡು ಮನುಷ್ಯರು ಬೊಗಳುವಾಗ ತಾವು ಬೊಗಳುವುದು ಸಭ್ಯತೆಯ ಲಕ್ಷಣ ಅಲ್ಲವೆಂದು ಶ್ವಾನಕ್ಕೆ ತಿಳಿದಿದೆ.

ರಮೇಶ್, ಹನುಮನಾಳು
ಮನಸು–ಮನಸುಗಳ ಪ್ರೀತಿ; ಹೃದಯ–ಹೃದಯಗಳ ಪ್ರೀತಿ; ಮಾತು–ಮಾತುಗಳ ಪ್ರೀತಿ; ಇವುಗಳಲ್ಲಿ ಯಾವುದು ಮುಖ್ಯ?
ಎಲ್ಲವೂ ಮುಖ್ಯವೇ – ಕ್ರಮವಾಗಿ ಸೈಕಾಲಜಿಸ್ಟ್, ಕಾರ್ಡಿಯಾಲಜಿಸ್ಟ್, ರೇಡಿಯೊ ಜಾಕಿಗಳಿಗೆ.

■ ರಾಮ್